## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಸಾರ್ವಜನಿಕ ಉದ್ದಿಮೆಗಳಲ್ಲಿ ಅನುಕಂಪದ ಆಧಾರದ ನೇಮಕಾತಿ ಮಾಡುವ ಕುರಿತು ಮಾರ್ಗಸೂಚಿಗಳು.

ಓದಲಾಗಿದೆ: 1) ಸರ್ಕಾರದ ಅಧಿಸೂಚನೆ ಸಂ.ಸುಇ 100 ಎಸ್ ಪಿ ಎ 95 ದಿನಾಂಕ:12/09/1996.

2) ಸರ್ಕಾರದ ಸುತ್ತೋಲೆ ಸಂ.ಸುಇ(ಬಿಪಿಇ) 154 ಎಸ್ ಪಿ ಯು 95(ಪಿ) ದಿನಾಂಕ:26/02/1997.

3) ಸರ್ಕಾರದ ಆದೇಶ ಸಂ.ಸಾಉಇ 106 ಎ ಆರ್ ಯು 2017 ದಿನಾಂಕ:16/05/2019.

ಪ್ರಸ್ತಾವನೆ:

ಕರ್ನಾಟಕ ರಾಜ್ಯ ಸರ್ಕಾರದ ನೌಕರರಿಗೆ ಅನ್ವಯವಾಗುವಂತೆ, ಮೇಲಿನ ಕ್ರಮ ಸಂಖ್ಯೆ(1) ರಲ್ಲಿ ಓದಲಾದ ದಿನಾಂಕ:12/09/1996ರ ಸರ್ಕಾರದ ಅಧಿಸೂಚನೆಯಲ್ಲಿ ಅನುಕಂಪದ ಆಧಾರದ ನೇಮಕಾತಿ ನಿಯಮಗಳನ್ನು ರಚಿಸಲಾಗಿದೆ.

ಕರ್ನಾಟಕ ನಾಗರೀಕ ಸೇವಾ (ಅನುಕಂಪದ ಆಧಾರದ ನೇಮಕಾತಿ) ನಿಯಮಗಳು,1996ನ್ನು ಎಲ್ಲಾ ಸಾರ್ವಜನಿಕ ಉದ್ದಿಮೆಗಳು, ನಿಯಮದ ಮೂಲ ಉದ್ದೇಶಗಳಿಗೆ ಧಕ್ಕೆಯಾಗದಂತೆ, ತಮಗೆ ಅವಶ್ಯವಿರುವ ಬದಲಾವಣೆಗಳೊಂದಿಗೆ ಅಳವಡಿಸಿಕೊಳ್ಳಲು ಮೇಲೆ ಕ್ರಮ ಸಂಖ್ಯೆ(2)ರಲ್ಲಿ ಓದಲಾದ ಸರ್ಕಾರದ ದಿನಾಂಕ:26/02/97ರ ಸುತ್ತೋಲೆಯಲ್ಲಿ ಎಲ್ಲಾ ಸಾರ್ವಜನಿಕ ಉದ್ದಿಮೆಗಳಿಗೆ ಸೂಚಿಸಲಾಗಿದೆ.

ಆದಾಗ್ಯೂ ಅನುಕಂಪದ ಆಧಾರದ ನೇಮಕಾತಿಯನ್ನು, ಯಾವ ಮೂಲ ಉದ್ದೇಶದಿಂದ ಸರ್ಕಾರವು ಜಾರಿಗೊಳಿಸಿದೆಯೋ, ಆ ಉದ್ದೇಶದ ಸಮರ್ಪಕ ಅನುಷ್ಠಾನ ಎಲ್ಲಾ ಸಾರ್ವಜನಿಕ ಉದ್ದಿಮೆಗಳಲ್ಲಿ ಆಗದೇ ಇರುವ ಹಿನ್ನಲೆಯಲ್ಲಿ ಸಾರ್ವಜನಿಕ ಉದ್ದಿಮೆಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಉದ್ದಿಮೆಗಳು/ನಿಗಮ/ಮಂಡಳಿ/ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವಾಗ ಮೃತಪಟ್ಟ ಉದ್ಯೋಗಿಗಳ ಅವಲಂಬಿತರಿಗೆ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ. ಏಕರೂಪದ ನಿಯಮಗಳನ್ನು/ಮಾರ್ಗಸೂಚಿಗಳನ್ನು ರೂಪಿಸುವ ಬಗ್ಗೆ ಮೇಲಿನ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿನಾಂಕ:16/05/2019ರ ಸರ್ಕಾರದ ಆದೇಶದನ್ವಯ ಸಮಿತಿಯನ್ನು ರಚಿಸಲಾಗಿದೆ. ಸರ್ಕಾರವು ರಚಿಸಿರುವ ಸಮಿತಿಯು ನೀಡಿರುವ ಸಲಹೆಗಳನ್ನಾಧರಿಸಿ, ಎಲ್ಲಾ ಸಾರ್ವಜನಿಕ ಉದ್ದಿಮೆಗಳಿಗೆ ಏಕರೂಪದ ಮಾರ್ಗಸೂಚಿ ದೊರೆಯುವ ಆಶಯವನ್ನಿರಿಸಿ ಮುಂದಿನ ಆದೇಶವನ್ನು ಹೊರಡಿಸಲಾಗಿದೆ:-

**ಸರ್ಕಾರಿ ಆದೇಶ ಸಂಖ್ಯೆ: ಸಾಉಇ 46 ಎ ಆರ್ ಯು 2019,**

**ಬೆಂಗಳೂರು, ದಿನಾಂಕ: 21 ನೇ ಡಿಸೆಂಬರ್ 2020**

1) ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಉದ್ದಿಮೆಗಳು/ನಿಗಮ/ ಮಂಡಳಿ/ಸಂಸ್ಥೆಗಳು, ಕರ್ನಾಟಕ ನಾಗರೀಕ ಸೇವಾ (ಅನುಕಂಪದ ಆಧಾರದ ನೇಮಕಾತಿ) ನಿಯಮಗಳು,1996ನ್ನು ನಿಯಮದ ಮೂಲ ಉದ್ದೇಶಗಳಿಗೆ ಧಕ್ಕೆಯಾಗದಂತೆ, ತಮ್ಮ Memorandum Of Association/Article Of Association ನಲ್ಲಿ ಪ್ರಚುರಪಡಿಸಿರುವ ಉದ್ದೇಶಗಳಿಗೆ ಅವಶ್ಯವಿರುವ ಬದಲಾವಣೆಗಳೊಂದಿಗೆ ಈ ಆದೇಶ ಹೊರಡಿಸಿದ ಒಂದು ತಿಂಗಳೊಳಗಾಗಿ ಅಳವಡಿಸಿಕೊಂಡು ಸರ್ಕಾರಕ್ಕೆ ತಿಳಿಸುವುದು.
2) ಈ ಆದೇಶವು ಹಿಂದಿನ ಮೂರು ವರ್ಷಗಳಿಂದ ಸತತವಾಗಿ ಲಾಭದಲ್ಲಿರುವ ಉದ್ದಿಮೆ/ ನಿಗಮ/ಮಂಡಳಿ/ಸಂಸ್ಥೆಗಳಿಗೆ ಕಡ್ಡಾಯವಾಗಿ ಅನ್ವಯಿಸುವುದು.

...2/

KMDC LTD.
Head Office Bangalore
05 JAN 2021

CS/CFO

3) ಹಿಂದಿನ ಮೂರು ವರ್ಷಗಳಲ್ಲಿ ನಿರಂತರವಾಗಿ ನಷ್ಟದಲ್ಲಿರುವ ಉದ್ದಿಮೆ/ನಿಗಮ/ಮಂಡಳಿ/ಸಂಸ್ಥೆಗಳು ತಮ್ಮ ಆಡಳಿತ ಮಂಡಳಿಯ ವಿವೇಚನೆಗೆ ಒಳಪಟ್ಟು ಸದರಿ ಆದೇಶವನ್ನು ಅನ್ವಯಿಸಿಕೊಳ್ಳಬಹುದು. ಆದರೆ ಉದ್ದಿಮೆ/ನಿಗಮ/ಮಂಡಳಿ/ಸಂಸ್ಥೆಗಳು ಲಾಭ ಮಾಡಲು ಪ್ರಾರಂಭಿಸಿದಾಗ ಸದರಿ ಆದೇಶವನ್ನು ಕಡ್ಡಾಯವಾಗಿ ಅನ್ವಯಿಸಿಕೊಳ್ಳುವುದು.

4) ಎಲ್ಲಾ ಉದ್ದಿಮೆ/ನಿಗಮ/ಮಂಡಳಿ/ಸಂಸ್ಥೆಗಳಲ್ಲಿ ನೇರ ನೇಮಕಾತಿಗೆ ಲಭ್ಯವಿರುವ ಹುದ್ದೆಗಳು ಹಾಗೂ ಅನುಕಂಪದ ಆಧಾರದ ಇತ್ಯರ್ಥವಾಗದ ಅರ್ಜಿಗಳ ಮಾಹಿತಿಯನ್ನು ಕೇಂದ್ರೀಕೃತವಾಗಿ ಲಭ್ಯವಿರುವಂತೆ Database ತಯಾರಿಸಿಕೊಳ್ಳಲು ಅನುಬಂಧ-1ರಲ್ಲಿರುವ ನಮೂನೆಯಲ್ಲಿ ಈ ಆದೇಶ ಹೊರಡಿಸಿದ ಒಂದು ತಿಂಗಳೊಳಗಾಗಿ ಸರ್ಕಾರಕ್ಕೆ ಒದಗಿಸುವುದು ಹಾಗೂ ಪ್ರತೀ 3 ತಿಂಗಳಿಗೊಮ್ಮೆ ಮಾಹಿತಿಯನ್ನು ತಪ್ಪದೇ ನವೀಕರಿಸುವುದು.

5) ಈಗಾಗಲೇ ಅನುಕಂಪದ ಆಧಾರದ ನೇಮಕಾತಿಗಾಗಿ ಸಲ್ಲಿಸಿರುವ ಅರ್ಜಿಗಳಲ್ಲಿ, ಇತ್ಯರ್ಥವಾಗದೇ ಇರುವ ಅರ್ಜಿಗಳನ್ನು ಆದ್ಯತೆಯ ಮೇರೆಗೆ ಇತ್ಯರ್ಥಗೊಳಿಸಲು ಕ್ರಮವಹಿಸುವುದು. ಸದರಿ ಅರ್ಜಿಗಳ ಪೈಕಿ ವಯೋಮಿತಿಯನ್ನು ಮೀರಿದ ಪ್ರಕರಣಗಳಲ್ಲಿ, ಅರ್ಜಿ ಸಲ್ಲಿಸಿದ ದಿನಾಂಕದಂದು ಅರ್ಹರಾಗಿದ್ದಲ್ಲಿ, ರಿಯಾಯಿತಿ ನೀಡಿ ಅರ್ಜಿಗಳನ್ನು ಪರಿಗಣಿಸುವುದು ಅನುಕಂಪದ ಆಧಾರದ ನೇಮಕಾತಿಯ ಮುಖ್ಯ ಉದ್ದೇಶವು ಮೃತ ನೌಕರರ ಕುಟುಂಬಕ್ಕೆ ಆರ್ಥಿಕ ಆಸರೆ ನೀಡುವುದಾಗಿರುವುದರಿಂದ, ಮೃತ ನೌಕರನ ವಿಧವೆಯನ್ನು ನೇಮಕಾತಿಗೆ ಪರಿಗಣಿಸುವ ಸಂದರ್ಭದಲ್ಲಿ, ಗರಿಷ್ಠ ವಯೋಮಿತಿಯ ಸಂಬಂಧದಲ್ಲಿ, ಸರ್ಕಾರದ ಸಹಮತಿ ಪಡೆದು ಕ್ರಮವಹಿಸುವುದು ಹಾಗೂ ಆರ್ಥಿಕ ಸೌಲಭ್ಯವನ್ನು ನೇಮಕಾತಿಗೆ ಹಾಜರಾದ ದಿನದಿಂದ ಅನ್ವಯಿಸುವುದು.

6) ಮೃತ ನೌಕರರು ಕಾರ್ಯನಿರ್ವಹಿಸುತ್ತಿದ್ದ ಉದ್ದಿಮೆ/ನಿಗಮ/ಮಂಡಳಿ/ಸಂಸ್ಥೆಯಲ್ಲಿ, ಮೃತ ನೌಕರರ ಅವಲಂಬಿತ ಅರ್ಜಿದಾರರನ್ನು ನೇಮಕಾತಿ ಮಾಡಿಕೊಳ್ಳಲು ಖಾಲಿ ಹುದ್ದೆ ಲಭ್ಯವಿಲ್ಲದ ಸಂದರ್ಭದಲ್ಲಿ, ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ವ್ಯಾಪ್ತಿಯಲ್ಲಿರುವ ಬೇರೆ ಉದ್ದಿಮೆ/ನಿಗಮ/ಮಂಡಳಿ/ಸಂಸ್ಥೆಯಲ್ಲಿ ಅನುಕಂಪದ ಆಧಾರದ ನೇಮಕಾತಿಗೆ ಮೀಸಲಿಟ್ಟಿರುವ ಹುದ್ದೆಗಳು ಖಾಲಿಯಿದ್ದಲ್ಲಿ, ಅವಲಂಬಿತ ಅರ್ಜಿದಾರರು ಅಪೇಕ್ಷಿಸಿದಲ್ಲಿ, ಸರ್ಕಾರದ ಅನುಮೋದನೆ ಪಡೆದು ಅಂತಹ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸಲು ಕ್ರಮಕೈಗೊಳ್ಳುವುದು.

7) ಉದ್ದಿಮೆ/ನಿಗಮ/ಮಂಡಳಿ/ಸಂಸ್ಥೆಗಳ ಮಂಜೂರಾದ ಹುದ್ದೆಗಳನ್ನು ನಿಯೋಜಿತ ಸಿಬ್ಬಂದಿಯಿಂದ ಭರ್ತಿಗೊಳಿಸಿಕೊಂಡಿದ್ದಲ್ಲಿ, ಅಂತಹ ಸಿಬ್ಬಂದಿಯನ್ನು ಮಾತೃ ಇಲಾಖೆಗೆ ಮರಳಿಸಿ, ಅನುಕಂಪದ ಆಧಾರದ ನೇಮಕಾತಿಗೆ ಅನುವು ಮಾಡಿಕೊಡುವುದು.

8) ಉದ್ದಿಮೆ/ನಿಗಮ/ಮಂಡಳಿ/ಸಂಸ್ಥೆಗಳ ಮಂಜೂರಾದ ಹುದ್ದೆಗಳನ್ನು, ಅನುಕಂಪದ ಆಧಾರದ ನೇಮಕಾತಿಗೆ ಅರ್ಹವಿರುವ ಅರ್ಜಿಗಳನ್ನು ಬಾಕಿಯುರಿಸಿಕೊಂಡು, ಯಾವುದೇ ಕಾರಣಕ್ಕೂ ಗುತ್ತಿಗೆ ಆಧಾರದಲ್ಲಿ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲು ಅವಕಾಶವಿಲ್ಲ.

9) ಉದ್ದಿಮೆ/ನಿಗಮ/ಮಂಡಳಿ/ಸಂಸ್ಥೆಗಳ ಒಟ್ಟು ಮಂಜೂರಾದ 'ಸಿ' ಮತ್ತು 'ಡಿ' ದರ್ಜೆಯ ಹುದ್ದೆಗಳಲ್ಲಿ ಶೇ.5 ರಷ್ಟು ಹುದ್ದೆಗಳನ್ನು ಅನುಕಂಪದ ಆಧಾರದ ನೇಮಕಾತಿಗೆ ಮೀಸಲಿರಿಸುವುದು.

10) ಮೃತ ನೌಕರರು ಉದ್ದಿಮೆ/ನಿಗಮ/ಮಂಡಳಿ/ಸಂಸ್ಥೆಗಳಲ್ಲಿ ಕ್ರಮಬದ್ಧವಾಗಿ ನೇಮಕ ಹೊಂದಿರಬೇಕು. ಸೇವಾ ನಿವೃತ್ತಿಯ ನಂತರ ಮರು ನೇಮಕಾತಿಗೊಂಡಿರುವ ಪ್ರಕರಣಗಳನ್ನು ಪರಿಗಣಿಸುವಂತಿಲ್ಲ.

...3/

11) ಅನುಕಂಪದ ಆಧಾರದ ನೇಮಕಾತಿ ಅರ್ಜಿಗಳನ್ನು ಸಿ ಮತ್ತು ಡಿ ದರ್ಜೆಯ/ವೃಂದ ಮತ್ತು ನೇಮಕಾತಿ ನಿಯಮಗಳು ಇಲ್ಲದಿದ್ದಲ್ಲಿ ಕೆಳ ದರ್ಜೆಯ ಹುದ್ದೆಗಳ ನೇಮಕಾತಿಗೆ ಮಾತ್ರ ಪರಿಗಣಿಸುವುದು.

12) ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಹಾಗೂ ಅವಶ್ಯವಿರುವ ನಿರ್ದಿಷ್ಟ ಅರ್ಹತೆಗಳನ್ನು ಅವಲಂಬಿತ ಅಭ್ಯರ್ಥಿಯು ಹೊಂದಿರುವುದು.

13) ಮೃತ ನೌಕರರ ಕುಟುಂಬದ ಎಲ್ಲಾ ಮೂಲಗಳಿಂದ ಬರುವ ಒಟ್ಟು ಮಾಸಿಕ ಆದಾಯವು ರಾಜ್ಯ ಸರ್ಕಾರದ ಪ್ರಥಮ ದರ್ಜೆ ಸಹಾಯಕರ/ ಸಂಸ್ಥೆಯ ತತ್ಸಮಾನ ಹುದ್ದೆಯ ಮಾಸಿಕ ಕನಿಷ್ಠ ಮೂಲ ವೇತನ ಹಾಗೂ ಅದಕ್ಕೆ ಸಲ್ಲುವ ಭತ್ಯೆಗಳಿಗಿಂತ ಜಾಸ್ತಿಯಿರಬಾರದು. (ಕುಟುಂಬ ನಿವೃತ್ತಿ ವೇತನ ಹಾಗೂ ಉಪದಾನಗಳನ್ನು ಪರಿಗಣಿಸಬಾರದು)

14) ಮೃತ ನೌಕರರ ಮಗ/ಮಗಳು ವ್ಯಾಖ್ಯೆಯಲ್ಲಿ, ಕಾನೂನುಬದ್ಧವಾಗಿ ದತ್ತು ಪಡೆದಿರುವ ಮಗ/ಅವಿವಾಹಿತ ಮಗಳು ಸಹಾ ಈ ಸೌಲಭ್ಯಕ್ಕೆ ಅರ್ಹರಿರುತ್ತಾರೆ.

15) ಮೃತ ನೌಕರರು ಅವಿವಾಹಿತರಾಗಿದ್ದಲ್ಲಿ ಹಾಗೂ ಕುಟುಂಬದ ಪೋಷಕರಾಗಿದ್ದಲ್ಲಿ ಅವಿವಾಹಿತ ಸಹೋದರ/ಸಹೋದರಿಯರಲ್ಲಿ, ಹಿರಿಯರನ್ನು ಅನುಕಂಪದ ಆಧಾರದ ನೇಮಕಾತಿಗೆ ಪರಿಗಣಿಸುವುದು.

16) ಅನುಕಂಪದ ಆಧಾರದ ನೇಮಕಾತಿಯ ಮೂಲಕ ಉದ್ಯೋಗ ಪಡೆಯುವ, ಮೃತ ನೌಕರರ ಅವಲಂಬಿತ ಸದಸ್ಯರಿಂದ, ಮೃತ ನೌಕರರ ಎಲ್ಲಾ ಅವಲಂಬಿತ ಸದಸ್ಯರನ್ನು ಪೋಷಣೆ ಮಾಡುವ ಬಗ್ಗೆ ಮುಚ್ಚಳಿಕೆಯನ್ನು ಪಡೆಯಬೇಕು

17) ಮೃತ ನೌಕರರ ನಿಧನಾನಂತರ, ಪತ್ನಿಯು ಅನುಕಂಪದ ಆಧಾರದ ಹುದ್ದೆಗೆ ಅರ್ಹರಿಲ್ಲದಿದ್ದಲ್ಲಿ, ನೌಕರರ ನಿಧನದ ದಿನಾಂಕದಿಂದ ಒಂದು ವರ್ಷದೊಳಗೆ ಮಗ/ಮಗಳಿಗೆ 18 ವರ್ಷ ತುಂಬುವಂತಿದ್ದರೆ ಹಾಗೂ 18 ವರ್ಷ ತುಂಬಿದ ದಿನಾಂಕದಿಂದ, ಒಂದು ವರ್ಷದ ವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡುವುದು.

ಈ ಮೇಲಿನ ಮಾರ್ಗಸೂಚಿಗಳನ್ನು ಕಟ್ಟು ನಿಟ್ಟಾಗಿ ಪಾಲಿಸುವಲ್ಲಿ ಯಾವುದೇ ರೀತಿಯ ಗೊಂದಲಗಳಿದ್ದಲ್ಲಿ, ಅವಶ್ಯಕ ಸಂದರ್ಭಗಳಲ್ಲಿ ಮಾತ್ರ ಆಡಳಿತ ಇಲಾಖೆಯ ಮುಖಾಂತರ ಸಾರ್ವಜನಿಕ ಉದ್ದಿಮೆಗಳ ಇಲಾಖೆಯನ್ನು ಸಂಪರ್ಕಿಸುವುದು.

•ಅರ್ಜಿ ನಮೂನೆಯನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಹೆಚ್.ಅನಿಲ್ ಕುಮಾರ್) 21/12/20...

ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ,
ಸಾರ್ವಜನಿಕ ಉದ್ದಿಮೆಗಳ ಇಲಾಖೆ

ಪ್ರತಿಗಳು:

1. ಆಡಳಿತ ಇಲಾಖೆಗಳ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು

...4/